ABVP Srushti Technical Fair is Organised from Tomorrow in RVCE Campus

ವಿಜಯವಾಣಿ ನಂ 1

# ಎಬಿವಿಪಿ ಸೃಷ್ಟಿ ತಾಂತ್ರಿಕ ಮಹಾಮೇಳ

## ನಾಳೆಯಿಂದ 3 ದಿನ ಆರ್‌ವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜನೆ

» ರಾಜ್ಯಪಾಲ ವಿ.ಆರ್.ವಾಲಾ ಅವರಿಂದ ಚಾಲನೆ

» 3 ಸಾವಿರ ಪ್ರತಿನಿಧಿಗಳು ಪಾಲ್ಗೊಳ್ಳುವ ನಿರೀಕ್ಷೆ

» ವಿದ್ಯಾರ್ಥಿಗಳ ಪ್ರತಿಭೆಗೆ ಅವಕಾಶ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಶುಕ್ರವಾರದಿಂದ (ಮೇ 26) 28ರವರೆಗೆ ಮೈಸೂರು ರಸ್ತೆಯ ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಂತಿಮ ವರ್ಷದ ತಾಂತ್ರಿಕ ವಿದ್ಯಾರ್ಥಿಗಳ ಯೋಜನೆಗಳ ಪ್ರದರ್ಶನ ಮತ್ತು ಸ್ಪರ್ಧೆ 'ಸೃಷ್ಟಿ' ಹಮ್ಮಿಕೊಂಡಿದೆ. ರಾಜ್ಯಪಾಲ ವಿ.ಆರ್. ವಾಲಾ ಸಂಜೆ 4ಕ್ಕೆ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ.

**ವಿಜಯವಾಣಿ** ಮತ್ತು 'ದಿಗ್ವಿಜಯ 24X7 ನ್ಯೂಸ್' ಮಾಧ್ಯಮ ಸಹಯೋಗದಲ್ಲಿ ಆಯೋಜಿಸಿರುವ ಪ್ರದರ್ಶನದಲ್ಲಿ ಅಗ್ನಿ- ಕ್ಷಿಪಣಿ ವಿಭಾಗದ ಯೋಜನಾ ನಿರ್ದೇಶಕಿ ಟೆಸ್ಸಿ ಥಾಮಸ್, ಶ್ರೀರಾಮ್ ಪ್ರಾಪರ್ಟಿಸ್ ಎಂಡಿ ಎಂ. ಮುರುಳಿ, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಅಧ್ಯಕ್ಷ ಎಂ.ಕೆ. ಪಾಂಡುರಂಗ ಶೆಟ್ಟಿ ಉಪಸ್ಥಿತರಿರುವರು.

ಚಿತ್ರಕಲಾ ವಿಭಾಗದ ವಿದ್ಯಾರ್ಥಿಗಳಿಗಾಗಿ 'ಆರ್ಟ್ ಮ್ಯಾಟರ್ಸ್' ಸ್ಪರ್ಧೆ ಏರ್ಪಡಿಸಲಾಗಿದೆ. ಹಾಗಾಗಿ, 'ಸೃಷ್ಟಿ' ಪ್ರದರ್ಶನವು ಕಲಾ ಮತ್ತು ತಂತ್ರಜ್ಞಾನದ ಎಲ್ಲ ಆಯಾಮಗಳನ್ನು ಪರಿಚಯಿಸಲಿದೆ ಎಂದು ಎಬಿವಿಪಿ ತಿಳಿಸಿದೆ.

**ಸೃಷ್ಟಿಯ ವಿಶೇಷ:** ಇಂಜಿನಿಯರಿಂಗ್ ವಿದ್ಯಾರ್ಥಿಗಳು ನಡೆಸುವ ಅಧ್ಯಯನ ಮತ್ತು ಸಂಶೋಧನೆಗಳು ದೇಶದ ಪ್ರಗತಿಗೆ ಪೂರಕವಾಗಿರಬೇಕು. ಈ ಬಗ್ಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಲು ಎಬಿವಿಪಿ 15 ವರ್ಷಗಳಿಂದ ಈ ಕಾರ್ಯಕ್ರಮ ಆಯೋಜಿಸುತ್ತಿದೆ. ಬೆಳಗಾವಿ, ಮೈಸೂರು, ಹುಬ್ಬಳಿ, ದಾವಣಗೆರೆ, ಬಾಗಲಕೋಟೆ, ಹಾಸನ, ತುಮಕೂರು, ವಿಜಯಪುರ, ಮಂಗಳೂರು, ಹಾಗೂ ಬೆಂಗಳೂರಿನಲ್ಲಿ ಸೃಷ್ಟಿ ಕಾರ್ಯಕ್ರಮಗಳು ನಡೆದಿವೆ. ಈ ಬಾರಿ ಮೇಳದಲ್ಲಿ 500 ಯೋಜನೆಗಳು, 3 ಸಾವಿರ ಪ್ರತಿನಿಧಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಕ್ಯಾಂಪಸ್ ಟು ಕಮ್ಯುನಿಟಿ ಪರಿಕಲ್ಪನೆಯೊಂದಿಗೆ ಸೃಷ್ಟಿ ಆಯೋಜಿಸಲಾಗುತ್ತಿದೆ. ಸಮಾಜದ ಅಗತ್ಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವಲ್ಲಿ ಇದು ಸಂಪರ್ಕ ಸೇತುವೆಯಾಗಿದೆ. ವಿದ್ಯಾರ್ಥಿಗಳಿಗಿರುವ ಪ್ರತಿಭೆಗೆ ಅವಕಾಶ ಕಲ್ಪಿಸುವುದು, ಸಂಶೋಧನಾ ಪ್ರವೃತ್ತಿಗೆ ಒತ್ತು ಕೊಡುವುದು, ಕೈಗಾರಿಕೋದ್ಯಮಿಗಳು, ತಜ್ಞರು, ವಿಜ್ಞಾನಿಗಳೊಂದಿಗೆ ವಿಷಯ ವಿನಿಯಮಕ್ಕೆ ಅವಕಾಶ ಕಲ್ಪಿಸುವುದು ಇದರ ಉದ್ದೇಶವಾಗಿದೆ. ಮೂರು ದಿನಗಳ ಪ್ರದರ್ಶನದಲ್ಲಿ ತಾಂತ್ರಿಕ ಗೋಷ್ಠಿಗಳು ನಡೆಯಲಿವೆ ಎಂದು ಎಬಿವಿಪಿ ತಿಳಿಸಿದೆ.

ವಿಜಯವಾಣಿ
ದಿಗ್ವಿಜಯ 24X7 NEWS DIGHVIJAY
ಮಾಧ್ಯಮ ಸಹಯೋಗ




### ಸೃಷ್ಟಿ ವೆಬ್‌ಸೈಟ್‌ನಲ್ಲಿ ಮಾಹಿತಿ

ಸೃಷ್ಟಿ ಕಾರ್ಯಕ್ರಮ ಹಿನ್ನೆಲೆಯಲ್ಲಿ ಲೋಕಾರ್ಪಣೆಗೊಂಡಿರುವ www.abvpsrishti.org ನಲ್ಲಿ ಎಲ್ಲ ಮಾಹಿತಿಗಳು ಲಭ್ಯವಿವೆ. ಮಾಹಿತಿಗೆ ದೂ: 080-23366456, 94498 35645 ಸಂಪರ್ಕಿಸಿ.

### 28ಕ್ಕೆ ಸಮಾರೋಪ

28ರ ಸಂಜೆ 4ಕ್ಕೆ ಪ್ರದರ್ಶನ ಸಮಾರೋಪಗೊಳ್ಳಲಿದೆ. ಕೇಂದ್ರ ಸಚಿವ ಅನಂತಕುಮಾರ್, ಬಾಬಾ ಅಣು ಸಂಶೋಧನಾ ಕೇಂದ್ರದ ಮಾಜಿ ನಿರ್ದೇಶಕ ಡಾ. ಅನಿಲ್ ಕಾಕೊಡ್ಕರ್, ಎಐಸಿಟಿಇ ಅಧ್ಯಕ್ಷ ಡಾ. ಅನಿಲ್ ಸಹಸ್ರಬುದ್ಧೆ, ಎಸ್‌ಟಿಪಿಐ ಪ್ರಧಾನ ನಿರ್ದೇಶಕ ಡಾ. ಓಂಕಾರ್ ರೈ, ವಿಟಿಯು ಕುಲಪತಿ ಡಾ. ಕರಿಸಿದ್ದಪ್ಪ, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಕೆ.ಜಿ. ಸುಬ್ಬರಾಮ್ ಶೆಟ್ಟಿ ಉಪಸ್ಥಿತರಿರುವರು.

### ಆರ್ಟ್ ಮ್ಯಾಟರ್ಸ್‌ನಿಂದ 'ಕಲಾವೈಭವ'

ಸೃಷ್ಟಿ ತಾಂತ್ರಿಕ ಮೇಳದಲ್ಲಿ ಚಿತ್ರಕಲಾ ವಿಭಾಗದ ವಿದ್ಯಾರ್ಥಿಗಳು ತಮ್ಮ ಕಲಾಕೃತಿಗಳನ್ನು ಆರ್ಟ್ ಮ್ಯಾಟರ್ಸ್ ಮೂಲಕ ಪ್ರದರ್ಶಿಸಲಿದ್ದಾರೆ. ಶಿಲ್ಪಕಲೆ, ಭಿತ್ತಿಚಿತ್ರ ತಯಾರಿಕೆ, ಉತ್ಪನ್ನ ವಿನ್ಯಾಸ, ಛಾಯಾಚಿತ್ರ, ಕಿರುಚಿತ್ರ ಮತ್ತು ಅನಿಮೇಷನ್‌ಗಳನ್ನು ಪ್ರದರ್ಶಿಸಲಿದ್ದಾರೆ.